





# ಯಾಕೂಬ್ ಮೇಷ್ಟ್ರು ಆಡಾಡ್ತಾ ಗಣಿತ

**ಸೆಪ್ಟೆಂಬರ್ 5 ಶಿಕ್ಷಕರ ದಿನ**

ಯಾಕೂಬ್ ಕೊಯ್ಯೂರು ಅವರ ಗಣಿತಪಾಠ ಇಡೀ ದೇಶದಲ್ಲಿ ಸುದ್ದಿಮಾಡುತ್ತಿದೆ. ವಿಷಯ ಇಷ್ಟೇ: ‘ಉತ್ತಮ ಶಿಕ್ಷಕ’ ರಾಷ್ಟ್ರೀಯ ಪ್ರಶಸ್ತಿಗೆ ಅವರು ಆಯ್ಕೆಯಾಗಿದ್ದಾರೆ. ಯಾಕೂಬ್ ಅವರೀಗ ಕನ್ನಡ ನಾಡಿನ ಹೆಮ್ಮೆ.

ದಕ್ಷಿಣ ಕನ್ನಡದ ಬೆಳ್ತಂಗಡಿ ತಾಲ್ಲೂಕಿನ ನಡ ಎನ್ನುವ ಊರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಯಾಕೂಬ್ ಗಣಿತ ಶಿಕ್ಷಕರು. ಯಾಕೂಬ್ ಮಾಸ್ತರರೆಂದರೆ ಮಕ್ಕಳ ಕಣ್ಣಲ್ಲಿ ಹೊಳಪು ಮೂಡುತ್ತದೆ. ಸಾಮಾನ್ಯವಾಗಿ ಗಣಿತದ ಮೇಷ್ಟ್ರು ಮಕ್ಕಳಿಗೆ ಇಷ್ಟವಾಗುವುದು ಕಷ್ಟ. ಆದರೆ, ಯಾಕೂಬ್ ವಿಷಯದಲ್ಲಿ ಹಾಗಲ್ಲ. ಅವರು ಮಕ್ಕಳೊಡನೆ ಸ್ನೇಹಿತನಂತೆ ಮಾತನಾಡುತ್ತಾರೆ. ಶಾಲೆಯಲ್ಲಿ ಆಟದ ಪೀರಿಯೆಡ್‌ಗೆ ಗಂಟೆ ಬಾರಿಸಿದ ಕೂಡಲೇ ಮಕ್ಕಳೆಲ್ಲ ಮೇಷ್ಟ್ರು ಹತ್ತಿರ ಓಡಿಬರುತ್ತಾರೆ. ‘ಸರ್, ಗಣಿತದ ಲ್ಯಾಬ್ ತೆರೆಯಿರಿ. ನಾವು ಅಲ್ಲೇ ಆಟವಾಡಿಕೊಳ್ತೇವೆ’ ಎನ್ನುತ್ತಾರೆ.

## ಗಣಿತದ ಲ್ಯಾಬ್‌ನಲ್ಲಿ ಆಟ

ಗಣಿತವೆಂದರೆ ಕಬ್ಬಿಣದ ಕಡಲೆ ಎಂಬ ಭ್ರಮೆಯನ್ನು ಹೋಗಲಾಡಿಸಿ, ಅದೊಂದು ಆಡಾಡ್ತಾ ಕಲಿಯುವ ವಿದ್ಯೆ ಎಂಬುದನ್ನು ಮಕ್ಕಳಿಗೆ ಮನದಟ್ಟು ಮಾಡಿರುವುದು ಯಾಕೂಬ್ ಮೇಷ್ಟರ ಹೆಗ್ಗಳಿಕೆ. ವಿಜ್ಞಾನದ ಪ್ರಯೋಗಾಲಯದಂತೆಯೇ ನಡ ಪ್ರೌಢಶಾಲೆಯಲ್ಲಿ ಗಣಿತದ ಪ್ರಯೋಗಾಲಯ ರೂಪಿಸಿದ್ದಾರೆ. ಆ ಶಾಲೆಯಲ್ಲಿ ಮಕ್ಕಳು ಪೈಥಾಗೊರಸನ ಪ್ರಮೇಯವನ್ನು ಬಾಯಿಪಾಠ ಮಾಡಿದ್ದೇ ಇಲ್ಲ. ಬಣ್ಣದ ತ್ರಿಕೋನಗಳನ್ನು ಒಂದರ ಮೇಲೊಂದು ಇಟ್ಟು, ಪೆನ್ನು ಪುಸ್ತಕ ಹಿಡಿದು ತಾವೇ ಲೆಕ್ಕ ಮಾಡುತ್ತಾ... ‘ಪೈಥಾಗೊರಸ ಹೇಳಿದ್ದು ನಮಗೆ ಇದೇ ಡೆಸ್ಕಿನ ಮೇಲೆ ಕಾಣಿಸುತ್ತಿದೆಯಲ್ಲಾ’ ಎಂಬ ವಿಸ್ಮಯದೊಂದಿಗೆ ಕಲಿಯುತ್ತಾರೆ. ಆ ಮಟ್ಟಿಗೆ ಇಲ್ಲಿನ ಮಕ್ಕಳಿಗೆ, ಅರಿವೇ ಗುರು.

## ಲೆಕ್ಕವೆಂದರೆ ಅಕ್ಕರೆ

ಗಣಿತವನ್ನು ಈ ಮಟ್ಟಿಗೆ ಹಚ್ಚಿಕೊಳ್ಳಲು ಕಾರಣವೇನು? ಎಂದು ಪ್ರಶ್ನಿಸಿದರೆ, ಮೇಷ್ಟ್ರು ತಮ್ಮ ತಂದೆ, 84 ವರ್ಷದ ಇಸುಬು ಬ್ಯಾರಿಯವರ ಮುಖ ನೋಡುತ್ತಾರೆ. ಚಿಕ್ಕವನಾಗಿದ್ದಾಗ, ಅಪ್ಪ ಮಾಡುತ್ತಿದ್ದ ಬೀಡಿಯ ಲೆಕ್ಕಾಚಾರದ ಕುರಿತು ಒಂದು ಕತೆ ಹೇಳುತ್ತಾರೆ:

“ಅಪ್ಪನಿಗೆ ಶಾಲೆಗೆ ಹೋಗಲು ಬಹಳ ಆಸೆಯಿತ್ತು. ಆದರೆ ಅಜ್ಜ ಕಲಿಸಲಿಲ್ಲ. ಮದರಸದಲ್ಲಿ ಗುರುಗಳು, ‘ಸ್ವಲ್ಪ ಕನ್ನಡ ಹೇಳಿಕೊಡುತ್ತೇನೆ, ಒಂದು ಸ್ಲೇಟ್ ತಾ’ ಎಂದು ಹೇಳಿದ್ದರು. ಗುರುಗಳು ಹೇಳಿದರೂ, ಶಾಲೆಯ ಬರಹ–ಕಲಿಕೆ ಎಂಬುದೆಲ್ಲ ಅಜ್ಜನಿಗೆ ವ್ಯರ್ಥ ಅನ್ನಿಸಿ ಬೈದೇ ಬಿಟ್ಟರು. ‘ದುಡಿದು ತಿಂದರೆ ಸಾಕು, ಆಫೀಸು ಕೆಲಸ ಮಾಡ್ಲಿಕ್ಕೇನೂ ಇಲ್ಲ ನೀನು’ ಎಂದು ಅಜ್ಜ ಬೈದಿದ್ದರು. ಆದರೆ ಅಪ್ಪನ ತಮ್ಮನಿಗೆ, ಅಂದರೆ ನನ್ನ ಚಿಕ್ಕಪ್ಪನಿಗೆ ಶಾಲೆಗೆ ಹೋಗುವ ಯೋಗ ಸಿಕ್ಕಿತು. ಶಾಲೆಗೆ ಹೋಗಿ ಕಲಿಯುವುದೆಂದರೆ ಅವರಿಗೆ ಅಷ್ಟೇನೂ ಇಷ್ಟವಿರಲಿಲ್ಲ. ಆದರೆ, ತಮ್ಮ ಶಾಲೆಗೆ ಹೋಗುವುದು ಅಣ್ಣನಿಗೆ ಅನುಕೂಲವಾಯಿತು. ತಮ್ಮ ಸಂಜೆ ಶಾಲೆಯಿಂದ ಮನೆಗೆ ಬಂದ ಕೂಡಲೇ, ತಮ್ಮನ ಪಾಟೀಚೀಲವನ್ನು ಗಟ್ಟಿಯಾಗಿ ಹಿಡಿದುಕೊಂಡದ್ದು ಅಪ್ಪ. ತಮ್ಮನ ಪುಸ್ತಕ ನೋಡಿಯೇ ಅಕ್ಷರ ಕಲಿತರು. ಓದಲು ಬರೆಯಲು ಕಲಿತರು. ಅವರು ವೃತ್ತಿಯಲ್ಲಿ